ಕರ್ನಾಟಕ ಸರ್ಕಾರ

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ತಾಲ್ಲೋಕು ವಲಯ ಮೈಸೂರು ತಾಲ್ಲೋಕು

E-mail Id : beo.mysorerural@gmail.com

ಸಂಖ್ಯೆ: ಎ5.ಮಾ.ನವೀ.06/2023-24 ದಿನಾಂಕ: 03.06.2023

ನಮೂನೆ-3 (ಕರ್ನಾಟಕ ಶಿಕ್ಷಣ ಅಧಿನಿಯಮ-7)

## ತಾತ್ಕಾಲಿಕ ಮಾನ್ಯತೆ ನವೀಕರಣ

| | | | |
|---|---|---|---|
| 1 | ನೊಂದಣಿ ಸಂಖ್ಯೆ | 1/2000-01 | |
| 2 | ಗೌರ್ನಿಂಗ್ ಕೌನ್ಸಿಲ್ ಹೆಸರು ಮತ್ತು ವಿಳಾಸ | ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠ(ರಿ), ಶ್ರೀ ದೇಗುಲ ಮಠ, ಕನಕಪುರ | |
| 3 | ಶಾಲೆಯ ಹೆಸರು ಮತ್ತು ವಿಳಾಸ | ಶ್ರೀ ನಿರ್ವಾಣಸ್ವಾಮಿ ಪೂರ್ವ ಪ್ರಾಥಮಿಕ ಶಾಲೆ, ಆಲನಹಳ್ಳಿ, ಮೈಸೂರು ತಾಲ್ಲೂಕು. | |
| 4 | ತಾತ್ಕಾಲಿಕ ಮಾನ್ಯತೆ ಕಾರಣ | ನಿಯಮ-38 | |
| 5 | ಯಾವ ಷರತ್ತುಗಳನ್ನು ಪೂರೈಸಿರುವುದಿಲ್ಲ | ------ | |
| 6 | ಶಿಕ್ಷಣ ಸಂಸ್ಥೆ ಯಾವ ವರ್ಗಕ್ಕೆ ಸೇರಿದೆ | ಸಾಮಾನ್ಯ | |
| 7 | ಮಾನ್ಯತೆ ನೀಡಿದ ವರ್ಷ ಮತ್ತು ವಿವರ | 2023-24ನೇ ಸಾಲಿನಿಂದ 2025-26ನೇ ಸಾಲಿನ ವರೆಗೆ ಮಾನ್ಯತೆ ನವೀಕರಣ ನೀಡಿದೆ. | |
| | ತರಗತಿ | ಎಲ್.ಕೆ.ಜಿ | ಯು.ಕೆ.ಜಿ |
| | ವಿಭಾಗ | 1 | 1 |
| 8 | ಷರತ್ತುಗಳನ್ನು ಪೂರೈಸಬೇಕಾದ ಕಾಲಾವಧಿ | ------------------ | |

ಈ ಶಾಲೆಗೆ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಶಾಶ್ವತ ಅನುದಾನ ರಹಿತವಾಗಿ ತಾತ್ಕಾಲಿಕ ಮಾನ್ಯತೆಯನ್ನು ನೀಡಿದೆ.

**ಷರತ್ತುಗಳು:-**

1. ಪೂರ್ವಾನುಮತಿ ಇಲ್ಲದೇ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡಬಾರದು.
2. ಸಿ.ಸಿ.ಟಿ.ವಿ ವ್ಯವಸ್ಥೆ ಮಾಡುವುದು.
3. ಅವಧಿ ಮುಗಿದ ನಂತರ ಮಾನ್ಯತೆ ನವೀಕರಣಕ್ಕಾಗಿ ನಿಗಧಿತ ಸಮಯದಲ್ಲಿ ಪ್ರಸ್ತಾವನೆ ಸಲ್ಲಿಸುವುದು.
4. ಆರ್.ಟಿ.ಇ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
5. ಸ್ಥಳಾವಕಾಶವನ್ನು ಹೆಚ್ಚಿಸಬೇಕು. ಸ್ವಂತ ಕಟ್ಟಡವನ್ನು ಹೊಂದಿರತಕ್ಕದ್ದು ಮತ್ತು ಶೌಚಾಲಯ, ಕುಡಿಯುವ ನೀರು ಇರಬೇಕು.
6. ಅಗತ್ಯಕ್ಕನುಗುಣವಾಗಿಪೀಠೋಪಕರಣ, ಪಾಠೋಪಕರಣ ಹಾಗೂ ಆಟದ ಮೈದಾನವನ್ನು ಒದಗಿಸುವುದು.
7. ನಿಗಧಿತ ವಿದ್ಯಾರ್ಹತೆ ಹೊಂದಿದ ಅರ್ಹ ಶಿಕ್ಷಕರನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳತಕ್ಕದ್ದು.
8. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಅಥವಾ ಸ್ಟಾಫ್ ಪ್ಯಾಟ್ರನ್ ಅನುಸಾರ ಕನಿಷ್ಠ ಶಿಕ್ಷಕರ ನೇಮಕ ಆಗಬೇಕು.
9. ಪೂರ್ವಾನುಮತಿ ಇಲ್ಲದೇ ಹೆಚ್ಚುವರಿ ತರಗತಿಗಳನ್ನಾಗಲೀ, ವಿಭಾಗಗಳನ್ನಾಗಲೀ ತೆರೆಯಕೂಡದು.
10. ಕಾಲ ಕಾಲಕ್ಕೆ ಹೊರಡಿಸಲಾದ ಸರ್ಕಾರಿ ಆದೇಶವನ್ನು ಪಾಲಿಸುವುದು.
11. ಮಾನ್ಯತೆ ನೀಡಿದ ಅವದಿಯಲ್ಲಿ ಕ.ಶಿ.ಮ ನಿಯಮ 1995 ರ ಅನುಬಂಧ-4ರ ಪ್ರಕಾರ ಕನಿಷ್ಠ ದಾಖಲಾತಿ/ಹಾಜರಾತಿ ಇಲ್ಲದಿದ್ದಲ್ಲಿ ಮತ್ತು ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮಾನ್ಯತೆಯು ತಂತಾನೇ ರದ್ದಾಗುವುದು.
12. ವೇತನವನ್ನು ಕಡ್ಡಾಯವಾಗಿ ಬ್ಯಾಂಕ್ ಮೂಲಕ ಪಾವತಿಸತಕ್ಕದ್ದು.
13. ಎಲ್ಲಾ ಶಿಕ್ಷಕರಿಗೆ ಕನಿಷ್ಠ ವೇತನ ನಿಯಮದನ್ವಯ ವೇತನ ಪಾವತಿಸತಕ್ಕದ್ದು ಹಾಗೂ ಸೇವಾ ಭದ್ರತೆ ಒದಗಿಸುವುದು.
14. ಶಾಲೆಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ನಿಗದಿತ ವೇಳೆಯಲ್ಲಿ ಪೂರೈಸತಕ್ಕದ್ದು ತಪ್ಪಿದಲ್ಲಿ ನೋಂದಣಿಯನ್ನು ಕರ್ನಾಟಕ ಶಿಕ್ಷಣ ಮಸೂದೆ ನಿಯಮ 39 ರ ಪ್ರಕಾರ ರದ್ದುಗೊಳಿಸಲಾಗುವುದು.
15. ಸರ್ಕಾರ ನಿಗಧಿಪಡಿಸಿದ ಶುಲ್ಕವನ್ನು ವಸೂಲಿ ಮಾಡತಕ್ಕದ್ದು. ಶುಲ್ಕವನ್ನು ಶಾಲಾ ಸೂಚನಾ ಫಲಕದಲ್ಲಿ ಪ್ರಕಟಿಸಿರಬೇಕು.
16. ಶಾಲಾ ವಾಹನಕ್ಕೆ ಸಂಬಂಧಿಸಿದಂತೆ ಎಲ್ಲಾ ಸುರಕ್ಷಿತ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳುವುದು.

17. ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ/ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟಲು ಇಲಾಖೆ ಹೊರಡಿಸುವ ಸುತ್ತೋಲೆಯಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.
18. ಸಂಸ್ಥೆಯು ಸೊಸೈಟಿ ಆಗಿದ್ದಲ್ಲಿ ಸಹಕಾರ ಸಂಘದಲ್ಲಿ ಚಾಲ್ತಿ ವರ್ಷ ನೋಂದಣಿಯನ್ನು ನವೀಕರಿಸಬೇಕು.
19. ಅಗ್ನಿ ನಿರೋಧಕ ಯಂತ್ರವನ್ನು ಕಡ್ಡಾಯವಾಗಿ ಶಾಲೆಯಲ್ಲಿ ಅಳವಡಿಸಿರಬೇಕು.
20. ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದುಕೊಳ್ಳುವುದು.
21. ಮಕ್ಕಳ ಸುರಕ್ಷತಾ ಕ್ರಮಗಳನ್ನು ಅನುಸರಿಸತಕ್ಕದ್ದು. ಸಮಿತಿಯನ್ನು ರಚಿಸತಕ್ಕದ್ದು.
22. ಅನುಮತಿಸಿದ ಸ್ಥಳದಲ್ಲಿಯೇ ಶಾಲೆಯನ್ನು ನಡೆಸತಕ್ಕದ್ದು, ಇಲಾಖಾ ಪೂರ್ವಾನುಮತಿ ಇಲ್ಲದೇ ಸ್ಥಳಾಂತರ ಮಾಡುವಂತಿಲ್ಲ.
23. ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ದಾಖಲೆಗಳು ಸುಳ್ಳು ಎಂದು ಕಂಡು ಬಂದಲ್ಲಿ ಈ ಮಾನ್ಯತೆಯನ್ನು ರದ್ದು ಪಡಿಸಲಾಗುವುದು.
24. 6ನೇ ಪರಿಷ್ಕೃತ ವೇತನ ಶ್ರೇಣಿಯನ್ವಯ ವೇತನವನ್ನು ಪಾವತಿಸುವುದು.
25. ಶೈಕ್ಷಣಿಕ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸುವುದು ಕಡ್ಡಾಯವಾಗಿರುತ್ತದೆ.
26. ಪ್ರಸ್ತಾವನೆಯಲ್ಲಿ ನೀಡಿರುವ ಮಾಹಿತಿ/ದಾಖಲೆಗಳು ಮಿಥ್ಯವೆಂದು ಕಂಡು ಬಂದಲ್ಲಿ ಅಥವಾ ಇಲಾಖಾ ತಪಾಸಣೆ ಸಂದರ್ಭದಲ್ಲಿ ಆಕ್ಷೇಪಣೆಗೊಂಡಲ್ಲಿ ಈ ಮಾನ್ಯತೆಯು ತಂತಾನೆ ರದ್ದಾಗುತ್ತದೆ.
27. ಸದರಿ ಶಾಲೆಯ ಕಟ್ಟಡವನ್ನು ಪ್ರಾರಂಭಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರತಕ್ಕದ್ದು ಹಾಗೂ ಆಗಿಂದಾಗ್ಗೆ ನಿಗದಿ ಪಡಿಸುವ ಶುಲ್ಕವನ್ನು ಪಾವತಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಷರತ್ತುಗಳು ಹಾಗೂ 1983ರ ಶಿಕ್ಷಣ ಕಾಯ್ದೆಯ ನಂತರ ಇಲಾಖೆಯಿಂದ ಹೊರಡಿಸಲಾದ ಎಲ್ಲಾ ನಿಯಮಗಳನ್ನು ಪಾಲಿಸುವುದು. ಒಂದು ವೇಳೆ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮಾನ್ಯತೆಯನ್ನು ವಾಪಸ್ ಪಡೆಯಲಾಗುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಮೈಸೂರು ಗ್ರಾಮಾಂತರ

ಗೆ,

1. ಕಾರ್ಯದರ್ಶಿ/ ಮುಖ್ಯ ಶಿಕ್ಷಕರು ಶ್ರೀ ನಿರ್ವಾಣಸ್ವಾಮಿ ಪೂರ್ವ ಪ್ರಾಥಮಿಕ ಶಾಲೆ, ಆಲನಹಳ್ಳಿ, ಮೈಸೂರು ತಾಲ್ಲೂಕು.
2. ಕಛೇರಿ ಪ್ರತಿ.